ಪರದೆ, ಖೈತಾನ್ ಫ್ಯಾನ್... ಎಲ್ಲವೂ ಸಂಜೆಯ ಸಂಧ್ಯಾವಂದನೆಯ ಸಮಯಕ್ಕೆ ಪ್ರತ್ಯಕ್ಷವಾಗುತ್ತಿದ್ದವು. ಆದರೂ ಈ ಕಿಲಾಡಿ ಸೊಳ್ಳೆಗಳು ಚೂರೂ ಸುಳಿವು ಕೊಡದೆ ಅದೆಲ್ಲಿ ಅಡಗಿಕೊಂಡು ಐಸ್‌ಪೈಸ್ ಆಡುತ್ತವೋ, ಚೀನಾ ಬ್ಯಾಟಿಗೂ ಸಿಕ್ಕದ ಹಾಗೆ ಹೇಗೆ ತಪ್ಪಿಸಿಕೊಳ್ಳುತ್ತವೋ ಭಗವಂತನಿಗೇ ಗೊತ್ತು. ಆದರೂ ಅದ್ವೈತ ತತ್ತ್ವ ಹೇಳುವ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ...' ಎನ್ನುವ ಮಾಯಾವಾದದಲ್ಲಿ ನಂಬಿಕೆಯಿರಿಸಿದವರು ಈ ನುಸಿಯಾವರಣ(ಪರದೆ)ದೊಳಗೆ ಕುಳಿತೊಮ್ಮೆ ಜಗತ್ತನ್ನು ನೋಡಬೇಕು... ಹೆಣ್ಣು ಮಾಯೆ ಎನ್ನುವ ವಾದದಲ್ಲಿ ನಂಬಿಕೆಯಿಲ್ಲದ ಪುರುಷರು ಈ ಹೆಣ್ಣು ಸೊಳ್ಳೆ ಸಂಹಾರ ಅಭಿಯಾನದಲ್ಲೊಮ್ಮೆ ಪಾಲ್ಗೊಳ್ಳಬೇಕು. ವಿರಾಗಿಣಿಯಂತೆ ಹಾಡ ಹಾಡುತ್ತಾ ಕಂಡು ಮರೆಯಾಗುವ ಕಾಣದೆ ಮರುಳಾಗಿಸುವ ಅದರ ಲೀಲಾ ವಿಭ್ರಮ ವಿಲಾಸವನ್ನೊಮ್ಮೆ ಕಣ್ತುಂಬಿಕೊಳ್ಳಬೇಕು... ಅನಿರ್ವಚನೀಯವಾದವುಗಳನ್ನು ಅನುಭವಜನ್ಯವಾಗಿಸಿಕೊಳ್ಳಲು ಇರುವ ಸುಲಭ ದಾರಿಗಳು ಇವು. ಜನ್ನಕವಿಯೇನಾದರು ಇಂದು ಬದುಕಿದ್ದಿದ್ದರೆ, 'ಮಶಕವೆಂಬ ಮಾಯೆ ನಿಂತ ನೀರಿನ ನೆರಂಬಡೆಯೆ ಕಚ್ಚಿ ಕೂಗದೇ ನರರಂ' ಎಂದು ಪ್ರಶ್ನಿಸಿಯೇ ಪ್ರಶ್ನಿಸುತ್ತಿದ್ದ.

'ಮಂಗಳನ ಅಂಗಳದಲ್ಲಿ ಮಶಕ ವಿಹಾರ' ಎಂಬ ವರದಿಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆಯಂತೆ. ಜೀವಿಗಳ ಸುಳಿವೇನಾದರೂ ಇದೆಯೇ ಎಂದು ಪರೀಕ್ಷಿಸಲು ಭೂಮಿಯಿಂದ ಕಳುಹಿದ ಉಪಗ್ರಹ ಸೊಳ್ಳೆಯ ಚಿತ್ರವೊಂದನ್ನು ಹಿಡಿದಿದೆಯಂತೆ. ಇದು ಉಪಗ್ರಹದೊಳಗೆ ನುಸುಳಿ ಇಲ್ಲಿಂದಲೇ ಹೋದ ಉಪದ್ರವಿ ನುಸಿಯೇ ಇರಬಹುದಲ್ಲದೆ ಅಂಗಾರಕನ ಅಂಗಳದಲ್ಲಿ ಹುಟ್ಟಿಕೊಂಡ ಅಂಟುಕನಾಗಿರಲಾರದು ಎಂಬುದು ಅಣುವಿಜ್ಞಾನಿಗಳ ಅಂಬೋಣವಂತೆ. ಏನೇ ಆದರೂ ವಸತಿ ಹುಡುಕಿಕೊಳ್ಳುವ ವರಸೆಯಲ್ಲಿ ಇದು ಮನುಷ್ಯರನ್ನೂ ಮೀರಿಸುತ್ತದೆ ಎಂದಾಯಿತು. ಆದರೂ ಮನುಷ್ಯರಿಲ್ಲದ ಊರಲ್ಲಿ ಚೀಪಿಕುಡಿಯಲು ನೆತ್ತರಿಲ್ಲದೆ, ತತ್ತಿಯಿಕ್ಕಲು ಕೊಚ್ಚೆಯಿಲ್ಲದೆ ಫಿಟ್ಟೆಸ್ಟ್ ಆಗಿದ್ದರೂ ಸರ್ವೈವ್ ಆಗುವುದು ಕಷ್ಟ ಎಂಬುದು ಈ ಅಣು ವಿಜ್ಞಾನಿಗಳ ವಾದವಂತೆ. ಗಂಡುಗಳೆಲ್ಲ ಹೂಗಳ ಸ್ವಾದವನ್ನು ಆಸ್ವಾದಿಸುತ್ತಾ ಗೆಳತಿಯರನ್ನು ಹುಡುಕುತ್ತಾ ರೊಮ್ಯಾಂಟಿಕ್ ಮೂಡ್‌ನಲ್ಲಿ ವಿಹರಿಸುತ್ತಿದ್ದರೆ, ಈ ಹೆಣ್ಣು ಸೊಳ್ಳೆಗಳು ಮನುಷ್ಯರ ಉಸಿರಾಟದಿಂದ ಹೊರಬರುವ ಕಾರ್ಬನ್ ಡೈ ಆಕ್ಸೈಡ್‌ನ ವಾಸನೆಯನ್ನು ಹಿಡಿದು ರಕ್ತ ಹೀರಲು ಸಿದ್ಧವಾಗುತ್ತವೆಯಂತೆ. ಹಾಗಾಗಿ ಉಸಿರಾಟ ನಿಲ್ಲಿಸುವುದೊಂದೆ ಸೊಳ್ಳೆಗಳನ್ನು ನಿವಾರಿಸಲು ಇರುವ ಸುಲಭೋಪಾಯ ಎಂಬ ಲೇಖನವೊಂದು ವಾಟ್ಸ್‌ಆ್ಯಪಿನಲ್ಲಿ ಹರಿದಾಡುತ್ತಿದೆಯಂತೆ. 'ರಕ್ತ ಪಿಪಾಸುಗಳ ದಾರಿ ತಪ್ಪಿಸಲು ಹೆಂಡ ಪಿಪಾಸುಗಳಾಗಿ...' 'ಸೊಳ್ಳೆಗಳಿಗೆ ಚಳ್ಳೆಹಣ್ಣು ತಿನ್ನಿಸಲು ಕಳ್ಳು...' ಹರಿದಾಡುತ್ತಿರುವ ಇಂಥಾ ಅನೇಕ ಲೇಖನಗಳನ್ನು ಯಾರೋ ಬಿಯರ್ ಕೊಟ್ಟು ಬರೆಸಿದ್ದಾರೆಂದು ಸುದ್ದಿ. ಇದನ್ನೆಲ್ಲ ನೋಡುವಾಗ ಮನುಷ್ಯ ಸಂತತಿಯ ನಿರ್ನಾಮದ ನಂತರವೇ ಈ ಸೊಳ್ಳೆಗಳ ನಾಮ ಇಲ್ಲದೆ ಆಗುವುದು ಎಂದು ತಿಳಿಯುತ್ತದೆ. ನಾಮ ಎಂದಾಗ ನೆನಪಾಯ್ತು, ಸಂಸ್ಕೃತದ ಮೂಷಿಕ ಹಾಗೂ ಮಶಕ ಇವೆರಡಕ್ಕೂ ಸಾಮ್ಯತೆಯಿದೆ... ಎರಡೂ ನಿದ್ರಾಭಂಗ ಮಾಡುವ ಉಪದ್ರವಿಗಳೇ ಆದರೂ, ಒಂದು ದ್ರವ ಹೀರದ ಉಪದ್ರವಿಯಾದರೆ ಇನ್ನೊಂದು ದ್ರವ ಹೀರುವ ಉಪದ್ರವಿ. ಇಂಥವನ್ನೆಲ್ಲ ದೇವರು ಯಾಕಾಗಿ ಸೃಷ್ಟಿಸುತ್ತಾನೋ? ಎಂದು ನನ್ನಷ್ಟಕ್ಕೇ ಗೊಣಗುತ್ತಾ ಕುಳಿತಿರುವಾಗ ಕನ್ನಡದ ಈ ಪದ್ಯ ಹೊಳೆಯಿತು.

ಭುವಿಯ ಮೇಲಿರುವ ಚರಾಚರವ ತಿಂದು
ತೇಗಿಹನು ಮಾನವನು ತಾ ನಿತ್ಯಸುಖಿಯೆಂದು
ತೇಗಿದವನ ನೆತ್ತರ ಹೀರಿ ಕುಡಿಯಲುಯೆಂದು
ಸೃಷ್ಟಿಯಾಯ್ತು ನುಸಿಯೆಂಬ ನುಸುಳು ಪಡೆಯೊಂದು||